# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನ ಭವನ, ನಂ. 24/3, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು 560 070
ದೂ. 080–26718939, ಮೊ. 9483549159 ಇ–ಮೇಲ್: krvp.info@gmail.com, website: www.krvp.org



ಮಹಾಪೋಷಕರು: 'ಭಾರತರತ್ನ' ಪ್ರೊ॥ ಸಿ.ಎನ್.ಆರ್. ರಾವ್ FRS
ರಾಷ್ಟ್ರೀಯ ಸಂಶೋಧನಾ ಪ್ರಾಧ್ಯಾಪಕರು ಹಾಗೂ ಗೌರವಾಧ್ಯಕ್ಷರು, ಜೆ.ಎನ್.ಸಿ.ಎ.ಎಸ್.ಆರ್.

| ಎಸ್.ವಿ. ಸಂಕನೂರ<br>ಅಧ್ಯಕ್ಷರು | ಹುಲಿಕಲ್ ನಟರಾಜ್<br>ಪ್ರೊ॥ ಗುರುನಂಜಯ್ಯ ಎಸ್.ಎಂ.<br>*ಉಪಾಧ್ಯಕ್ಷರು* | ಗಿರೀಶ್ ಬಿ. ಕಡ್ಲೇವಾಡ<br>ಗೌರವ ಕಾರ್ಯದರ್ಶಿ | ಶ್ರೀನಾಥ್ ಬಿ.ಎಸ್.<br>ಸಹ ಕಾರ್ಯದರ್ಶಿ | ನರೇಂದ್ರ ಆಡನೂರು<br>ಖಜಾಂಚಿ |
|---|---|---|---|---|


ಕರಾವಿಪ ಸಂಖ್ಯೆ : 6.5.2/SE/2018–19/4760 ದಿನಾಂಕ : 20–12–2018

ಪ್ರಿಯ ವಿದ್ಯಾರ್ಥಿ / ವಿದ್ಯಾರ್ಥಿನಿ,

**ವಿಷಯ : ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ರಾಜ್ಯ ಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ – 2018 ರಲ್ಲಿ ಭಾಗವಹಿಸುವ ಕುರಿತು.**

------

ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೆರವಿನಲ್ಲಿ ಹಾಗು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸಹಯೋಗದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ–2018 ನ್ನು ಆಯೋಜಿಸಿದೆ. ರಾಜ್ಯಮಟ್ಟದ ಈ ಸ್ಪರ್ಧೆಗೆ ತಾವು ವಿಭಾಗಮಟ್ಟದಲ್ಲಿ ಆಯ್ಕೆಗೊಂಡಿರುವುದಕ್ಕೆ ಅಭಿನಂದನೆಗಳು. ಸ್ಪರ್ಧೆಯಲ್ಲಿ ರಾಜ್ಯದ 6 ವಿಭಾಗಗಳಲ್ಲಿ 5 ಉಪ ವಿಷಯಗಳಲ್ಲಿ ಆಯ್ಕೆಯಾದ 30 ತಂಡಗಳಂತೆ 60 ವಿಜೇತ ವಿದ್ಯಾರ್ಥಿಗಳು ಹಾಗೂ ಪ್ರತಿ ತಂಡಕ್ಕೆ ಒಬ್ಬ ಮಾರ್ಗದರ್ಶಿ ಉಪನ್ಯಾಸಕರಂತೆ 30 ಮಾರ್ಗದರ್ಶಿ ಉಪನ್ಯಾಸಕರು ಭಾಗವಹಿಸುವರು.

ರಾಜ್ಯ ಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆಯು **ದಿನಾಂಕ 4 ಮತ್ತು 5 ಜನವರಿ 2019ಗಳಂದು (ಶುಕ್ರವಾರ ಮತ್ತು ಶನಿವಾರ) ಶ್ರೀ ಗವಿಸಿದ್ದೇಶ್ವರ ಪದವಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ, ಗವಿ ಮಠ ರಸ್ತೆ, ಕೊಪ್ಪಳ** ಇಲ್ಲಿ ಆಯೋಜಿಸಲಾಗುವುದು. ಶಿಬಿರಾರ್ಥಿಗಳು ದಿನಾಂಕ 4–01–2019 ರ ಬೆಳಿಗ್ಗೆ 10–00 ಗಂಟೆಯೊಳಗಾಗಿ ನೋಂದಣಿಯನ್ನು ಇದೇ ಕಾಲೇಜಿನಲ್ಲಿ ಮಾಡಿಸತಕ್ಕದ್ದು.

ತಮ್ಮ ಭಾಗವಹಿಸುವಿಕೆಗೆ ಅನುವಾಗುವಂತೆ ಈ ಕೆಳಕಂಡ ಪೂರಕ ಮಾಹಿತಿಗಳನ್ನು ತಮ್ಮ ಅವಗಾಹನೆಗೆ ಮತ್ತು ಪಾಲನೆಗೆ ನೀಡಿದೆ.

1. **ಕಾರ್ಯಕ್ರಮ** : ಪದವಿ ವಿಜ್ಞಾನ ವಿದ್ಯಾರ್ಥಿಗಳಿಗಾಗಿ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ– 2018
2. **ಸ್ಪರ್ಧೆಯ ದಿನಾಂಕ ಮತ್ತು ಸಮಯ : ದಿನಾಂಕ 4 ಮತ್ತು 5 ಜನವರಿ 2019 ರಂದು** ಬೆಳಿಗ್ಗೆ 10–00 ಗಂಟೆಗೆ
3. **ಸ್ಪರ್ಧೆ ನಡೆಯುವ ಸ್ಥಳ : ಶ್ರೀ ಗವಿಸಿದ್ದೇಶ್ವರ ಪದವಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯ, ಗವಿ ಮಠ ರಸ್ತೆ, ಕೊಪ್ಪಳ**
4. **ಸ್ಪರ್ಧೆಗೆ ಹಾಜರಾಗುವ ವಿದ್ಯಾರ್ಥಿಗಳ ಮತ್ತು ಮಾರ್ಗದರ್ಶಿ ಉಪನ್ಯಾಸಕರ ವಾಸ್ತವ್ಯದ ವಿವರಗಳು :**
   **ಭಾಗವಹಿಸುವ ವಿದ್ಯಾರ್ಥಿಗಳು ದಿನಾಂಕ 1 ಜನವರಿ 2019 ರೊಳಗಾಗಿ ಮೊ : 9980759704/9449530245 / 9008442557 ಇವರಲ್ಲಿ ನೋಂದಣಿ ಮಾಡಿಕೊಳ್ಳುವುದು ಹಾಗೂ** ವಾಸ್ತವ್ಯ ವ್ಯವಸ್ಥೆಗಾಗಿ ಇವರನ್ನು ಸಂಪರ್ಕಿಸುವುದು. ಓ.ಓ.ಡಿ. ಮತ್ತು ಊಟದ ವ್ಯವಸ್ಥೆಯನ್ನು ಕರಾವಿಪ ಕಲ್ಪಿಸುವುದು.

5. ವಿದ್ಯಾರ್ಥಿಗಳು ಪ್ರದರ್ಶಿಸುವಂತಹ ಮಾದರಿಗಳಿಗೆ ಅವಶ್ಯವಿರುವ ವಸ್ತುಗಳನ್ನು ತಾವೇ ತರುವುದು. **ವಿದ್ಯಾರ್ಥಿಗಳು (ಇಬ್ಬರು) ತಮ್ಮ ತಂಡದ ಮಾರ್ಗದರ್ಶಿ ಉಪನ್ಯಾಸಕರೊಂದಿಗೆ ಸ್ಪರ್ಧೆಗೆ ಹಾಜರಾಗಬೇಕು.**

ವಿದ್ಯಾರ್ಥಿಗಳು ವಿಜ್ಞಾನಿಗಳೊಂದಿಗೆ ನೇರ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ಸಮಾರೋಪ ಸಮಾರಂಭವು ದಿನಾಂಕ 5–1–2019 ರಂದು ಮಧ್ಯಾಹ್ನ 1–30 ಗಂಟೆಗೆ ಮುಗಿಯಲಿದ್ದು, ವಿದ್ಯಾರ್ಥಿಗಳು ತಮ್ಮ ಊರಿಗೆ ತೆರಳಲು ಪ್ರಯಾಣದ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಕರಾವಿಪ ಕಚೇರಿ, **ದೂ. 080–26718939 / 9483549159** ಇವರನ್ನು ಸಂಪರ್ಕಿಸಬಹುದು.

**ಸೂಚನೆ : ವಿದ್ಯಾರ್ಥಿಗಳು ನೋಂದಣಿಯ ಸಮಯದಲ್ಲಿ ತಮ್ಮ ಕಾಲೇಜಿನ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರುವುದು.**

ವಂದನೆಗಳು,

ಇತಿ ವಿಶ್ವಾಸದ,

(ಗಿರೀಶ್ ಬಿ. ಕಡ್ಲೇವಾಡ)
ಗೌರವ ಕಾರ್ಯದರ್ಶಿ.

**ಪ್ರತಿ :**

1) ಎಲ್ಲ 60 ವಿದ್ಯಾರ್ಥಿಗಳು
2) ಆಯಾ ಕಾಲೇಜಿನ ಪ್ರಾಧ್ಯಾಪಕರು
3) ಆಯುಕ್ತರು, ನಿರ್ದೇಶಕರು – ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
4) 6 ವಲಯಗಳ ಜಂಟಿ ನಿರ್ದೇಶಕರು, ಪ್ರಾದೇಶಿಕ ಕಚೇರಿ, ಕಾಲೇಜು ಶಿಕ್ಷಣ ಇಲಾಖೆ,
5) ರಾಜ್ಯ ಸಂಯೋಜಕರು, ವಿಜ್ಞಾನ ವಸ್ತುಪ್ರದರ್ಶನ ಸ್ಪರ್ಧೆ 2017–18
6) 6 ವಲಯಗಳ ಕಾರ್ಯಕ್ರಮ ಸಂಯೋಜಕರು
7) 6 ವಲಯಗಳಲ್ಲಿ ಆತಿಥ್ಯ ವಹಿಸಿದ ಕಾಲೇಜಿನ ಪ್ರಾಂಶುಪಾಲರಿಗೆ